**ಹಿಂದೀ ಮೂಲ : ಮೃದುಲಾ ಗರ್ಗ್**
**ಕನ್ನಡಕ್ಕೆ : ವನರಾಗ ಶರ್ಮಾ**

# ಹಸಿರು ಬಿಂದೀ



ಕಣ್ಣುಬಿಡುತ್ತಲೇ ಮೊಟ್ಟಮೊದಲು ಕಣ್ಣಿಗೆ ಬಿದ್ದದ್ದು ಕೈಗೆ ಕಟ್ಟಿಕೊಂಡ ವಾಚಿನ ಮೇಲೆ. ಕೇವಲ ಆರೂವರೆ ಗಂಟೆಯಾಗಿತ್ತು.

ಅವಳು ತಕ್ಷಣ ಮತ್ತೊಮ್ಮೆ ಕಣ್ಣು ಎಳೆದು ಮೆಲ್ಲನೆ ಮುಚ್ಚಿಕೊಂಡಳು ಮತ್ತು ಈಗ ಮಂಚ ಕಿರುಗುಟ್ಟುತ್ತದೆ ಮತ್ತು ಏಳುವುದಿಲ್ಲವೆ ಏನು? ಎಂಬ ದನಿ ಕೇಳಿಬರುತ್ತದೆ ಎಂದು ನಿರೀಕ್ಷಿಸಹತ್ತಿದಳು. ಸ್ವಲ್ಪ ಹೊತ್ತಿನ ತನಕ ಹಾಗೇ ಮೌನವಾಗಿದ್ದು ಅನಂತರ ಕಣ್ಣು ಬಿಟ್ಟು ನೋಡುತ್ತಾಳೆ: ಹಾಸಿಗೆಯ ಮೇಲೆ ಆಕೆಯೊಬ್ಬಳೇ ಇದ್ದಾಳೆ!! ಅರೆ... ಹ್ಹಾ... ರಾತ್ರಿಯೇ ರಾಜನ್ ದಿಲ್ಲಿಗೆ ಹೋಗಿದ್ದಾರೆ. ನೆನಪೇ ಇಲ್ಲವಲ್ಲ... ಸರಿ ಈಗ ಜಲ್ದೀ ಏಳುವ ಅಗತ್ಯವೇನಿಲ್ಲ. ಗಲ್ಲ ಉಬ್ಬಿಸಿ, ಸಾಕಷ್ಟು ಗಾಳಿ ತುಂಬಿಕೊಂಡು ದೀರ್ಘವಾಗಿ ನಿಶ್ವಾಸ ಬಿಟ್ಟಳು. ಆಮೇಲೆ ಹಾಸಿಗೆ ತುಂಬ ಹೊರಳಾಡಿ, ಇನ್ನೊಂದು ಅಂಚಿಗೆ ಸರಿದು ಮುಖದ ಮೇಲೆ ಕೈಯ್ಯಿಟ್ಟು ಮಲಗಿಕೊಂಡರೆ, ಕಿವಿಯಲ್ಲಿ ಗಡಿಯಾರದ ಟಿಕ್ ಟಿಕ್ ಸದ್ದು. ಅವಳು ನಕ್ಕಳು. ಆಕೆಗೆ ಮಣಿಕಟ್ಟಿಗೆ ವಾಚು ಕಟ್ಟಿಕೊಂಡು ಮಲಗುವ ಅಭ್ಯಾಸ. ದಿನಾಲೂ ರಾಜನ್ ಸಿಡಿಮಿಡಿಗೊಳ್ಳುತ್ತ ಹೇಳುತ್ತಾನೆ, 'ಏನು ಇಡೀ ರಾತ್ರಿ ಕಿವಿಯ ಹತ್ತಿರ ಟಿಕ್ ಟಿಕ್ ಸದ್ದು. ಅದನ್ನು ಕಳಚಿಯಾದರೂ ಇಡು.' ಅವಳು ಕೈಯ್ಯನ್ನು